# ಗಡಿಯೀಚೆಯ ಸದ್ದುಗಳು

ಕಾಫಿ ತಿಂಡಿಯಾದ ಮೇಲೆ, ಮಹಡಿಗೆ ಹತ್ತುವ ಮೆಟ್ಟಲುಗಳ ಹಿಂದೆ ಬಂದಲಾಗಾಯ್ತು ಇಟ್ಟಿದ್ದ ದೊಡ್ಡ ಸೂಟುಕೇಸನ್ನು ಈಚೆ ಎಳೆದು ತಂದರು ನರಸಪ್ಪ. ಎರಡು ತಿಂಗಳ ವಾರ್ಷಿಕ ರಜೆ ಕ್ಷಣವೆಂಬಂತೆ ಕಳೆದುಹೋಗಿತ್ತು. ತಳದಲ್ಲಿದ್ದ ಓಜಿ ಸಮವಸ್ತ್ರ ಹೊರತೆಗೆದು ತೋಳಿನ ಲೈನ್‌ಯಾರ್ಡ್ ಸರಿಪಡಿಸಿದರು. ಕಿಸೆಯಲ್ಲಿಟ್ಟಿದ್ದ ಐಡೆಂಟಿಟಿ ಕಾರ್ಡನ್ನು ಮುಟ್ಟಿ ಖಚಿತಪಡಿಸಿಕೊಂಡು, ಭುಜಕ್ಕೆ ಸಿಕ್ಕಿಸಿದ್ದ ಎರಡೆರಡು ಹಿತ್ತಾಳೆ ನಕ್ಷತ್ರಗಳನ್ನು ಕಳಚಿ ಉಜ್ಜಿ ಹೊಳಪುಗೊಳಿಸಿದರು. ಮರುಪ್ರಯಾಣದ ರೈಲುಟಿಕೆಟ್ಟನ್ನು ತೆಗೆದು ನೋಡಿ ಕೈಗೆ ಸಿಗುವಂತೆ ಮೇಲೆ ಇರಿಸಿಕೊಂಡರು. ಕಾಂತಮ್ಮ ತೊಳೆದು ಮಡಿಸಿಟ್ಟ ಪ್ಯಾಂಟು ಶರ್ಟುಗಳನ್ನು ಸೂಟುಕೇಸು ಪಕ್ಕದಲ್ಲಿರಿಸುತ್ತ, 'ಎಲ್ಲಾ ತೊಳೆದು ಇಸ್ತ್ರಿ ಮಾಡಿದೀನಿ' ಅಂದಳು. ವಾತಾವರಣದಲ್ಲಿ ವಿದಾಯದ ನೋವು ನಿನ್ನೆಯಿಂದಲೆ ಸಣ್ಣಕೆ ಪಸರಿಸತೊಡಗಿದ್ದು, ಮಾತು ಬೇಡವೆನಿಸುತ್ತಿತ್ತು. ನೆಂಟರು, ಸ್ನೇಹಿತರು, ಪರಿಚಿತರು ಅಂತ ಇಷ್ಟುದಿನ ಗದ್ದಲವಿರುತ್ತಿತ್ತು. ಬರುವಾಗ ತಂದ ಹತ್ತು ಬಾಟಲಿಗಳಲ್ಲಿ ಅರ್ಧಬಾಟಲು ಓಲ್ಡ್‌ಮಂಕ್ ರಮ್ ಉಳಿದಿತ್ತು. ಮೆತ್ತಿನ ಲಡ್ಡುಹಿಡಿದ ಜಂತಿಯನ್ನು ಸರಿಮಾಡಲು ಬಂದ ಬಡಗಿ ರಾಮಣ್ಣನಿಗೆ ಕುಡಿ ಅಂತ ಕೊಟ್ಟರು. ಎದುರುದಿಕ್ಕಿನ ಹಳೆಯ ಗೋಡೆಯ, ಯೋಚನೆಗೆ ಬಿದ್ದಾಗೆಲ್ಲ ಒರಗಿ ಒರಗಿ ಬಣ್ಣ ಮಾಸಿದ ಅದೇ ಜಾಗದಲ್ಲಿ, ಕುಳಿತು ಮೌನವಾಗಿ ನೋಡುತ್ತಿದ್ದ ಗೌರಮ್ಮನಿಗೆ ಇದು ಪ್ರತಿವರ್ಷಕ್ಕೊಮ್ಮೆ